ಸಂಖ್ಯೆ:ಸಿಬ್ಬಂದಿ(1)/16/2020.

ಕಮಾಂಡೆಂಟ್ ರವರ ಕಛೇರಿ,
11ನೇ ಪಡೆ, ಕೆ.ಎಸ್.ಆರ್.ಪಿ,
ಶಾಂತಿಗ್ರಾಮ ಹಾಸನ- 573220
ದಿನಾಂಕ:18/05/2021

**ಕರ್ನಾಟಕ ಸರ್ಕಾರ**
**(ಪೊಲೀಸ್ ಇಲಾಖೆ)**

**ವಿಷಯಃ** 11ನೇ ಪಡೆ, ಕೆ.ಎಸ್.ಆರ್.ಪಿ.ಯ ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಯ (ಭಾಗಶ:-2) ಅಂತಿಮ ಆಯ್ಕೆಪಟ್ಟಿ ಪ್ರಕಟಿಸುವ ಕುರಿತು.

**ಉಲ್ಲೇಖಃ**
1 ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2020 ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/188/ಪೊಸಿಅ/2018 ದಿನಾಂಕ:06/05/2020.
2 ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ಅಧಿಸೂಚನೆ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ: 28/03/2020.
3 ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ ಬೆಂಗಳೂರು ರವರ ಜ್ಞಾಪನ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ: 11/2/2021.
4 ಪ್ರಥಮ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಣೆ ದಿನಾಂಕ:23/02/2021.
5 ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ ಬೆಂಗಳೂರು ರವರ ಜ್ಞಾಪನ ಸಂಖ್ಯೆ:15/ನೇಮಕಾತಿ-4/2019-20 ದಿನಾಂಕ: 21/04/2021.
6 ಪರಿಷ್ಕ್ರತ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಣೆ ದಿನಾಂಕ:05/05/2021.

******

**ಕಮಾಂಡೆಂಟ್, 11ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು ಘಟಕಕ್ಕೆ ಸಂಬಂಧಿಸಿದ ವಿಶೇಷ ಮೀಸಲುಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ಭಾಗಶಃ(2) ಅಂತಿಮ ಆಯ್ಕೆಪಟ್ಟಿ.**

ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್, ಕೆ.ಎಸ್.ಆರ್.ಪಿ ಹುದ್ದೆಗಳ ನೇಮಕಾತಿಯನ್ನು ಉಲ್ಲೇಖ(2)ರ ಅಧಿಸೂಚನೆಯನ್ವಯ ಅಧಿಸೂಚಿಸಲಾಗಿರುತ್ತದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2020 ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ/188/ಪೊಸಿಅ/2018 ದಿನಾಂಕ:06/05/2020 ರಲ್ಲಿನ ನಿಯಮಗಳಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಲ್ಲೇಖಿತ ಪತ್ರದನ್ವಯ ಪ್ರಕಟಿಸಿದ ನಂತರ ಸದರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ನಂತರ ನಿಯಮಾನುಸಾರ ರಚಿಸಲಾಗಿರುವ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ವೈದ್ಯಕೀಯ ಪರೀಕ್ಷೆ ಪೂರ್ಣಗೊಂಡ ನಂತರ ಜಿಲ್ಲಾ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು, ಶ್ರೀಚಾಮರಾಜೇಂದ್ರ ಆಸ್ಪತ್ರೆ,ಹಿಮ್ಸ್ ಹಾಸನ ರವರು ನೀಡಿದ ವೈದ್ಯಕೀಯ ಪರೀಕ್ಷೆಯಲ್ಲಿ ಅನರ್ಹಗೊಂಡ, ಗೈರು ಹಾಜರಾದ, ಕೆ.ಎಸ್.ಆರ್.ಪಿ. ಪಿ.ಸಿ ಹುದ್ದೆಗೆ ಇಚ್ಛೆ ಇಲ್ಲವೆಂದು ಲಿಖಿತ ಮನವಿ ಸಲ್ಲಿಸಿದ ಹಾಗೂ ನಕಲಿ ಅಭ್ಯರ್ಥಿ ಸೇರಿದಂತೆ 51 ಅಭ್ಯರ್ಥಿಗಳನ್ನು ಪ್ರಥಮ ತಾತ್ಕಾಲಿಕ ಆಯ್ಕೆಪಟ್ಟಿಯಿಂದ ಕೈಬಿಟ್ಟು ಸದರಿ ಅಭ್ಯರ್ಥಿಗಳ ಬದಲಾಗಿ ಅರ್ಹರಿರುವ 51 ಅಭ್ಯರ್ಥಿಗಳನ್ನು ಮೇರಿಟ್ ಆಧಾರದ ಮೇಲೆ ಪರಿಷ್ಕೃತ ತಾತ್ಕಾಲಿಕ ಪಟ್ಟಿಯಲ್ಲಿಪರಿಗಣಿಸಿ ಆಯ್ಕೆಪಟ್ಟಿಯನ್ನು ಉಲ್ಲೇಖ-6 ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ, ಗುಣ ಮತ್ತು ನಡತೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.ಆದುದರಿಂದ ದಾಖಲಾತಿ ಪರಿಶೀಲನೆ ಪೂರ್ಣಗೊಂಡ ಅಭ್ಯರ್ಥಿಗಳ ದಾಖಲಾತಿಗಳ ನೈಜ್ಯತಾ ವರದಿ ಮತ್ತು ಅಭ್ಯರ್ಥಿಗಳ ಗುಣ ಮತ್ತು ನಡತೆ ಹಾಗೂ ವೈದ್ಯಕೀಯ ವರದಿ ಆಧಾರಿಸಿ ವೃಂದ ಮತ್ತು ನೇಮಕಾತಿ ನಿಯಮಾನುಸಾರ ಕೆ.ಎಸ್.ಆರ್.ಪಿ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಹಾಗೂ ಮೀಸಲಾತಿಯನುಸಾರ ಅರ್ಹ ಅಭ್ಯರ್ಥಿಗಳಿಗೆ ಕಮಾಂಡೆಂಟ್, 11ನೇ ಪಡೆ, ಕೆ.ಎಸ್.ಆರ್.ಪಿ ಘಟಕದ (ಭಾಗಶಃ-2) ಅಂತಿಮ ಆಯ್ಕೆಪಟ್ಟಿಯನ್ನು ತಯಾರಿಸಿ, ಕೆಳಕಂಡಂತೆ ಪ್ರಕಟಿಸಲಾಗಿರುತ್ತದೆ.

ಈ ಭಾಗಶಃ 2 ಅಂತಿಮ ಆಯ್ಕೆಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ಮಾನ್ಯ ಉಚ್ಛ ನ್ಯಾಯಾಲಯ/ ಮಾನ್ಯ ಭಾರತದ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

| PARTIAL (Part-2) FINAL SELECT LIST FOR THE POST OF SPL. RESERVE POLICE CONSTABEL OFKSRP (MEN) (MERITWISE) | | | | | | |
|---|---|---|---|---|---|---|
| SL. No | APPLICATION | ROLL NO | NAME | APPLIED CATEGORY | WRITTEN MARKS | SELECTED CATEGORY |
| 1 | 8418631 | 3229179 | SURESHKUMAR | ST | 75.5 | GM_OTH_21 |
| 2 | 8402001 | 3248013 | VIKAS M.N | 3A | 75.25 | GM_OTH_23 |
| 3 | 8404776 | 3244352 | GOPALA B.P | 3A | 75.25 | GM_OTH_24 |
| 4 | 8401169 | 3273966 | SOMSHEKHAR BEDASUR | 3B | 75.25 | GM_OTH_25 |
| 5 | 8402241 | 3252983 | SHARATH RAJ P.S | 3A | 75.25 | GM_OTH_26 |
| 6 | 8406999 | 3139225 | BASAVARAJ BALAGOUDA DESAI | 3B | 75.25 | GM_OTH_27 |
| 7 | 8417717 | 3170492 | RAJU JAKKAPPA TERADAL | 3B | 75.25 | GM_OTH_28 |
| 8 | 8412039 | 3286236 | SURESHA .D.A | CAT-1 | 75.25 | GM_OTH_29 |
| 9 | 8418492 | 3196694 | SHAILESH NELLUR | 3B | 75.25 | GM_OTH_30 |
| 10 | 8404675 | 3175424 | SHIVAKUMAR MATH | 3B | 75.25 | GM_OTH_31 |

**ಟಿಪ್ಪಣಿ:**

1) ಈ ಭಾಗಶಃ 2 ಅಂತಿಮ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳ ಆಯ್ಕೆಯು ಪ್ರವರ್ಗ ಮತ್ತು ಘಟಕಕ್ಕೆ ಹಂಚಿಕೆ ಮಾಡಲಾದ ಹುದ್ದೆಗಳು ನೇಮಕಾತಿ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಕೆಲವು ಅಭ್ಯರ್ಥಿಗಳ ಅನರ್ಹತೆಯ ಕಾರಣಗಳಿಂದ ಕ್ರೂಢೀಕೃತ ಆಯ್ಕೆ ಪಟ್ಟಿಯು ಪರಿಷ್ಕರಣೆಯಾದಲ್ಲಿ ಸದರಿ ಆಯ್ಕೆಪಟ್ಟಿಯಲ್ಲಿ ಬದಲಾವಣೆಯಾಗುವ ಪ್ರವರ್ಗಗಳನುಸಾರ ಘಟಕದಬದಲಾವಣೆಯ ಷರತ್ತುಗಳಿಗೆ ಒಳಪಟ್ಟಿರುತ್ತದೆ.
2) ಕಮಾಂಡೆಂಟ್ ಮತ್ತು ಅಧ್ಯಕ್ಷರು, ಸ್ಪೆ.ಆರ್.ಪಿ.ಸಿ ನೇಮಕಾತಿ ಸಮಿತಿ, 11ನೇ ಪಡೆ, ಕೆ.ಎಸ್.ಆರ್.ಪಿ, ಹಾಸನ ರವರ ನೇತೃತ್ವದಲ್ಲಿ **ದಿನಾಂಕ:18/05/2021** ರಂದು ಆಯೋಜಿಸಲಾದ ನೇಮಕಾತಿ ಪ್ರಕ್ರಿಯೆ ಸಭೆಯ ನಡವಳಿಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಮೇಲ್ಕಂಡ 10 ಅಭ್ಯರ್ಥಿಗಳನ್ನು ಭಾಗಶಃ 2 ಅಂತಿಮ ಆಯ್ಕೆಪಟ್ಟಿಗೆ ಪರಿಗಣಿಸಲಾಗಿದ್ದು, ಅದರಂತೆ, ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿರುತ್ತದೆ. ಉಳಿದಂತೆ 235 ಅಭ್ಯರ್ಥಿಗಳ ಗುಣ, ನಡತೆ, ವೈದ್ಯಕೀಯ ಪರೀಕ್ಷೆ ಹಾಗೂ ದಾಖಲೆಗಳ ಪರಿಶೀಲನಾ ವರದಿಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಸ್ವೀಕರಿಸಿದ ನಂತರದ ಪರಿಷ್ಕೃತ ಕ್ರೂಢೀಕೃತ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು.

ಸಹಿ/-
(ಪ್ರವೀಣ್ ಆಳ್ವ)
ಅಧ್ಯಕ್ಷರು,
11ನೇ ಪಡೆ, ಕೆಎಸ್ಆರ್‌ಪಿ,
ಸ್ಪೆಷಲ್ ಆರ್‌ಪಿಸಿ ಸೆಲೆಕ್ಷನ್ ಅಥಾರಿಟಿ ಮತ್ತು
ಕಮಾಂಡೆಂಟ್, 11ನೇ ಪಡೆ, ಕೆಎಸ್ಆರ್‌ಪಿ,
ಹಾಸನ.

ಸಹಿ/-
(ಆರ್.ಅರವಿಂದ)
ಸದಸ್ಯರು,
ಸ್ಪೆಷಲ್ ಆರ್‌ಪಿಸಿ ಸೆಲೆಕ್ಷನ್ ಅಥಾರಿಟಿ
ಮತ್ತು ಸಹಾಯಕ ಕಮಾಂಡೆಂಟ್,(ಅಡ್ಜು)
11ನೇ ಪಡೆ, ಕೆಎಸ್ಆರ್‌ಪಿ, ಹಾಸನ.

ಸಹಿ/-
(ಎಂ.ವಿ.ವೆಂಕಟೇಶ)
ಸದಸ್ಯ ಕಾರ್ಯದರ್ಶಿ,
ಸ್ಪೆಷಲ್ ಆರ್‌ಪಿಸಿ ಸೆಲೆಕ್ಷನ್ ಅಥಾರಿಟಿ
ಮತ್ತು ಸಹಾಯಕ ಆಡಳಿತಾಧಿಕಾರಿ,
11ನೇ ಪಡೆ, ಕೆಎಸ್ಆರ್‌ಪಿ, ಹಾಸನ.